# ಅವಧಿಪೂರ್ವ ಮಗುವಿನಲ್ಲಿ ರೆಟಿನೊಪತಿ



ಅವಧಿಪೂರ್ವ ಜನಿಸಿದ ಮಕ್ಕಳಲ್ಲಿ ಕಣ್ಣುಗಳ ಆರೋಗ್ಯದ ಸಮಸ್ಯೆ ಹೆಚ್ಚಾಗುತ್ತಿದೆ. 'ರೆಟಿನೊಪತಿ ಆಫ್ ಪ್ರಿಮೆಚ್ಯೂರಿಟಿ' ಎಂದು ಕರೆಯುವ ಈ ಕಾಯಿಲೆ ಮಗುವಿಗೆ ಮುಂದೆ ಶಾಶ್ವತ ಕುರುಡುತನ ತಂದೊಡ್ಡುವ ಅಪಾಯ ಇದೆ. ಮಗು ಹುಟ್ಟಿದ ಮೊದಲ ತಿಂಗಳಲ್ಲಿ ಸ್ಕ್ರೀನಿಂಗ್ ಮಾಡಿಸಿಕೊಳ್ಳುವ ಮೂಲಕ ಈ ಸಮಸ್ಯೆಯನ್ನು ಸುಲಭದಲ್ಲಿ ಪತ್ತೆ ಹಚ್ಚಬಹುದು.

**ಉಮಾ ಅನಂತ್**

ಮಾನಸಿಕ ಒತ್ತಡ ಹಾಗೂ ಮಧುಮೇಹದಿಂದ ಬಳಲುತ್ತಿದ್ದ ಬೆಂಗಳೂರಿನ ಮೂವತ್ತು ವರ್ಷದ ಹೇಮಾ ಗರ್ಭಿಣಿಯಾಗಿದ್ದಾಗ ಪ್ರತಿ ತಿಂಗಳೂ ತಪ್ಪದೇ ತಪಾಸಣೆ ಮಾಡಿಸಿಕೊಳ್ಳುತ್ತಿದ್ದರು. ನಿಯಮಿತ ಆಹಾರ, ಸರಿಯಾದ ಔಷಧಿ ಉಪಚಾರ ಎಲ್ಲ ಆಗಿದ್ದರೂ ಹೇಮಾ ಅವಧಿಪೂರ್ವ ಮಗುವಿಗೆ ಜನ್ಮ ನೀಡಬೇಕಾದ ಪರಿಸ್ಥಿತಿ ಒದಗಿಬಂದಿತ್ತು. ಹೀಗೆ ಅಕಾಲಿಕವಾಗಿ ಜನಿಸಿದ ಮಗುವಿಗೆ ಸಣ್ಣದೊಂದು ಕಣ್ಣಿನ ಸಮಸ್ಯೆಯೂ ತಲೆದೋರಿತ್ತು. ನೇತ್ರತಜ್ಞರಲ್ಲಿ ಮಗುವಿನ ಕಣ್ಣಿನ ತಪಾಸಣೆ ಮಾಡಿಸಿದಾಗ ಅದು 'ರೆಟಿನೊಪತಿ ಆಫ್ ಪ್ರಿಮೆಚ್ಯೂರಿಟಿ' (ಆರ್‌ಒಪಿ) ಎಂಬುದು ಪತ್ತೆಯಾಯಿತು.

ಹೌದು, ಅವಧಿಪೂರ್ವವಾಗಿ ಜನಿಸಿದ ಮಗುವಿನ ಕಣ್ಣುಗಳಲ್ಲಿನ ರೆಟಿನಾದ ರಕ್ತನಾಳಗಳಲ್ಲಿ ಅಸ್ವಾಭಾವಿಕವಾಗಿ ಅಂಗಾಂಶದ ಪದರ ಒಂದರ ಬೆಳವಣಿಗೆಯಾಗುತ್ತದೆ. ಇದು 'ರೆಟಿನೊಪತಿ ಆಫ್ ಪ್ರಿಮೆಚ್ಯೂರಿಟಿ' ಎಂಬ ರೋಗಕ್ಕೆ ಕಾರಣವಾಗುತ್ತದೆ. ಇದರ ಪರಿಣಾಮವಾಗಿ ಈ ಭಾಗದ ರಕ್ತನಾಳಗಳಿಂದ ರಕ್ತವು ಶಕ್ತಿಹೀನವಾಗಿ ಲಘುವಾಗಿ ಸೋರಿಕೆಯೂ ಆಗುತ್ತದೆ. ಇದು ಇಲ್ಲಿನ ಅಂಗಾಂಶಗಳಿಗೆ ಹಾನಿ ಮಾಡುವುದಲ್ಲದೆ ರೆಟಿನಾವನ್ನು ಕಣ್ಣುಗುಡ್ಡೆಗಳಿಂದ ಬೇರ್ಪಡಿಸಿ ಕುರುಡುತನಕ್ಕೆ ನಾಂದಿಯಾಗುವಂತೆ ಮಾಡುತ್ತದೆ. ಈ ಸಮಸ್ಯೆಯನ್ನು ಪರಿಹರಿಸಲು ಮಗು ಹುಟ್ಟಿದ ನಂತರ ಮೊದಲ ತಿಂಗಳಲ್ಲಿ ಸ್ಕ್ರೀನಿಂಗ್ ಮಾಡಿಸಿಕೊಂಡರೆ ಮಗುವಿಗೆ ರೆಟಿನೊಪತಿ ಬಾರದಂತೆ ತಡೆಯುವ ತಂತ್ರಜ್ಞಾನ ಬಂದಿದೆ. ಆ ಮೂಲಕ ಮಗು ಅಕಾಲಿಕವಾಗಿ ಜನಿಸಿದರೂ ಕಣ್ಣಿಗೆ ಹಾನಿಯಾಗುವುದನ್ನು ತಡೆಯುವ ಸಾಧ್ಯತೆ ಇದೆ.

ಮಗು ಅವಧಿಪೂರ್ವವಾಗಿ ಜನಿಸಿದಾಗ ತೂಕವೂ ಬಹಳ ಕಡಿಮೆ ಇರುತ್ತದೆ. ರೋಗ ನಿರೋಧಕ ಶಕ್ತಿಯೂ ಕಡಿಮೆಯೇ ಇರುತ್ತದೆ. ಇವೆರಡೂ ಪ್ರಮುಖ ಕಾರಣಗಳಿಂದಲೂ ಮಗುವಿಗೆ ರೆಟಿನೊಪತಿ ಬರುವ ಸಾಧ್ಯತೆ ಹೆಚ್ಚಿರುತ್ತದೆ.

'ಅವಧಿಪೂರ್ವ ಶಿಶು ಒಂದೂಮುಕ್ಕಾಲು ಕೇಜಿ (1750 ಗ್ರಾಂ) ಗಿಂತಲೂ ಕಡಿಮೆ ತೂಕವಿದ್ದರೆ ಹಾಗೂ ಅಂದಾಜು 34 ವಾರಗಳಿಗಿಂತ ಮೊದಲು ಜನಿಸಿದ್ದರೆ ರೆಟಿನೊಪತಿ ಕಾಯಿಲೆ ತುತ್ತಾಗುವ ಸಾಧ್ಯತೆ ಅಧಿಕವಿರುತ್ತದೆ. ಇಂತಹ ಮಕ್ಕಳು ಸಾಮಾನ್ಯವಾಗಿ ಶ್ವಾಸಕೋಶ ಸಮಸ್ಯೆಯನ್ನೂ ಎದುರಿಸುತ್ತವೆ. ಗರ್ಭಾವಸ್ಥೆಯ ಕೊನೆಯ ತ್ರೈಮಾಸಿಕದಲ್ಲಿ ಮಗುವಿನ ಬೆಳವಣಿಗೆ ಅತ್ಯಂತ ವೇಗವಾಗಿ ಆಗುವುದಲ್ಲದೆ ಕಣ್ಣುಗಳ ಬೆಳವಣಿಗೆಯೂ ಅತಿ ಶೀಘ್ರವಾಗಿ ಆಗುತ್ತದೆ. ಆದರೆ ಅವಧಿಗೆ ಮುನ್ನವೇ ಮಗು ಜನಿಸಿದರೆ ಕಣ್ಣಿನ ಸಮಸ್ಯೆ ಕಾಣಿಸಿಕೊಳ್ಳುತ್ತದೆ' ಎಂದು ಹೇಳುತ್ತಾರೆ ಬೆಂಗಳೂರಿನ ಡಾ. ಅಗರ್‌ವಾಲ್ಸ್ ಕಣ್ಣಿನ ಆಸ್ಪತ್ರೆಯಲ್ಲಿ ವಿಟ್ರಿಯೊ ರೆಟಿನಲ್ ಶಸ್ತ್ರಚಿಕಿತ್ಸಕಿಯಾಗಿರುವ ಡಾ. ಜ್ಯೋತ್ಸ್ನಾ ರಾಜಗೋಪಾಲ್.

ಅವಧಿಪೂರ್ವ ಮಕ್ಕಳಲ್ಲಿ ಕಣ್ಣಿನ ಸಮಸ್ಯೆ ಮಾತ್ರವಲ್ಲದೆ ಉಸಿರಾಟದ ತೊಂದರೆ, ರಕ್ತಹೀನತೆ, ರೋಗ ನಿರೋಧಕ ಶಕ್ತಿಯ ಕೊರತೆ, ಹೃದಯದ ಸಮಸ್ಯೆಗಳು ಕೂಡ ಕಂಡುಬರುತ್ತವೆ. ಹೀಗಾಗಿ ಇತರೆಲ್ಲ ಪರೀಕ್ಷೆಗಳ ಜೊತೆಗೆ ಕಣ್ಣುಗಳ ಸಮಸ್ಯೆ ಪತ್ತೆ ಹಚ್ಚುವ ತಪಾಸಣೆಯನ್ನೂ ಮಾಡಿಸಿಕೊಳ್ಳಬೇಕು. ಇದನ್ನು ರೆಟಿನಾ ತಜ್ಞರಷ್ಟೇ ಮಾಡಬಲ್ಲರು. ಅಲ್ಲದೆ ಸೂಕ್ತ ಚಿಕಿತ್ಸೆಯನ್ನೂ ನೀಡಲು ಸಾಧ್ಯವಿದೆ. ಹಾಗೆಂದು ಅವಧಿಪೂರ್ವವಾಗಿ ಹುಟ್ಟಿದ ಎಲ್ಲ ಮಕ್ಕಳಲ್ಲೂ ರೆಟಿನೊಪತಿ ಸಮಸ್ಯೆ ಬರಲೇಬೇಕೆಂದಿಲ್ಲ' ಎಂದು ವಿವರ ನೀಡುತ್ತಾರೆ ಡಾ. ಜ್ಯೋತ್ಸ್ನಾ.



ಡಾ. ಜ್ಯೋತ್ಸ್ನಾ ರಾಜಗೋಪಾಲ್

ಅವಧಿಪೂರ್ವ ಮಗುವಿಗೆ ಮೆಳ್ಳೆಗಣ್ಣು ಸಮಸ್ಯೆಯೂ ಕಾಡುವ ಅಪಾಯವಿದೆ. ಮೆಳ್ಳೆಗಣ್ಣಿನ ಬಳಿಕ ಸೋಮಾರಿ ಕಣ್ಣು ಸಮಸ್ಯೆ... ಹೀಗೆ ಒಂದರ ಮೇಲೆ ಒಂದು ಸಮಸ್ಯೆಗಳ ಸರಮಾಲೆ ಕಾಡುವುದು ಆತಂಕದ ವಿಚಾರ.

## ಸೋಮಾರಿ ಕಣ್ಣು ಸಮಸ್ಯೆ!

ಸಾಮಾನ್ಯವಾಗಿ ಮೆಳ್ಳೆಗಣ್ಣು ಇದ್ದ ಮಕ್ಕಳಿಗೆ ಎರಡೂ ಕಣ್ಣು ಸರಿಯಾಗಿ ಕಾಣಿಸದೇ ಇರಬಹುದು. ಒಂದು ಕಣ್ಣು ಚೆನ್ನಾಗಿ ಕಾಣುತ್ತಿದ್ದಾಗ ಇನ್ನೊಂದು ಕಣ್ಣು ಸೋಮಾರಿಯಾಗುತ್ತದೆ. ಇದಕ್ಕೆ 'ಲೇಜಿ ಐ' ಎಂದು ಕರೆಯುವರು. ಶಸ್ತ್ರಚಿಕಿತ್ಸೆ ಮೂಲಕ ಇದನ್ನು ಸರಿಪಡಿಸಬಹುದು.

## ಚಿಕಿತ್ಸೆ ಏನು?

ಸಾಮಾನ್ಯವಾಗಿ 'ರೆಟಿನೊಪತಿ ಆಫ್ ಪ್ರಿಮೆಚ್ಯೂರಿಟಿ' ಒಂದೇ ಸಲಕ್ಕೆ ಬರುವ ರೋಗವಲ್ಲ. ಇದು ಹಂತಹಂತವಾಗಿ ಬೆಳೆಯುವ ಕಾಯಿಲೆ. ಇದು ಗಂಭೀರ ಸ್ವರೂಪ ತಾಳಿದರೆ ಲೇಸರ್ ಚಿಕಿತ್ಸೆ ಪರಿಹಾರ ಒದಗಿಸಬಲ್ಲದು. ಪರಿಸ್ಥಿತಿ ಮತ್ತಷ್ಟು ಗಂಭೀರವಾದರೆ 'ರೆಟಿನಲ್ ಸರ್ಜರಿ'ಯನ್ನು ಮಾಡಿಸಬೇಕಾದ ಅಗತ್ಯವಿದೆ.

34–35 ವಾರಕ್ಕಿಂತ ಮೊದಲು, 1700 ಗ್ರಾಂಗಿಂತ ಕಡಿಮೆ ತೂಕದೊಂದಿಗೆ